

ಶರಭೇಶ್ವರ ದಾಮೋದರ ಟಾಕ್ಳೆ ವಾಮನನ ಅಣ್ಣ ಜಗದೀಶನ ಸಹಪಾಠಿ. ವಾಮನನಿಗಿಂತ ಸುಮಾರು ಹತ್ತು ವರ್ಷದಷ್ಟು ಇಲ್ಲಾ ತುಸು ಜಾಸ್ತಿಯೇ ಎನ್ನಿ. ಹೀಗೆ ದೊಡ್ಡವನು. ಆಗೆಲ್ಲ ಊರು ಗಿಣಿಪುರದಲ್ಲಿ ಎಷ್ಟೇ ದೊಡ್ಡವರನ್ನು ಬಹುವಚನದ ಉಪಯೋಗವೇ ಇಲ್ಲದೆ ಏಕವಚನದಲ್ಲಿ ಸಂಬೋಧಿಸುವುದು, ವಯಸ್ಸಿನಲ್ಲಿ ದೊಡ್ಡವರಿದ್ದರೂ ಹೆಸರು ಹಿಡಿದೇ ಕರೆಯುವುದು ಹೆಚ್ಚು ರೂಢಿ ಇತ್ತು. ಅಂದರೆ, ಹಾಗೇ ಕರೆಯಬೇಕು ಎಂದು ಒಂದು ಹಟದಿಂದ ಸಂಬೋಧಿಸುವುದಲ್ಲ. ಹಾಗೆಂದು ಅದು ಆ ರೂಢಿ ಖಾಯಂ ಆಗಿ ಮುಂದುವರಿಯುತ್ತಿತ್ತು ಎಂದೂ ಅಲ್ಲ. ಕ್ರಮೇಣ ಬಹುವಚನಕ್ಕೆ ತಿರುಗುವುದೂ ಅಲ್ಲಿ ಇಲ್ಲಿ ಉಂಟು ಎಂದು ಅನ್ನಬಹುದು. ಆದರೆ, ಅದು ಎಂದೂ ಅಣ್ಣ ಜಗದೀಶನ ಸಹಪಾಠಿ ಶರಭೇಶ್ವರ ಟಾಕ್ಳೆಗೆ ವಾಮನ, "ಟಾಕ್ಳೆ ಹೇಗಿದಿಯೋ" ಎಂದು ಏಕವಚನದಲ್ಲೇ ಕರೆಯುವ ಹಂತದಲ್ಲಿಯೇ ಇತ್ತು. ಹೋಗಲಿ, ಕಟ್ಟಕಡೆಗೆ, "ಶರಭಣ್ಣ ಹೇಗಿದೀಯಾ" ಎಂದು ಅಣ್ಣನಾಗಿ ರೂಪಾಂತರವಾಗುವ ಬದಲಾವಣೆಗೂ ಹೊಂದಿಕೊಂಡಿರಲಿಲ್ಲ. ಶರಭೇಶ್ವರ ದಾಮೋದರ ಟಾಕ್ಳೆ ಉರ್ಫ್ ಎಸ್.ಡಿ. ಟಾಕ್ಳೆಗೆ "ಹೇಗಿದೀಯಾ ಟಾಕ್ಳೆ" ಎಂಬುದಕ್ಕೇ ಸಂಬೋಧನೆ ನಿಂತಿತ್ತು. ಟಾಕ್ಳೆಗೂ 'ಟಾಕ್ಳೆ' ಎಂದು ಕರೆದರೆ ಸಾಕು, ತುಂಬಾ ಖುಷಿಯಾಗುತ್ತಿತ್ತು. ಟಾಕ್ಳೆಯ ಗಿಡ್ಡ ದೇಹ ವಾಮನನ್ನು ತನ್ನ ಅಂಗಡಿಯ ಎದುರಿಗೆ ಕಂಡಾಗ ಗಲ್ಲಾಪೆಟ್ಟಿಗೆ ಬಿಟ್ಟು ಸರಸರ ಕೆಳಗೆ ಅಂಗಡಿಯ ಮುಂಗಟ್ಟಿನಿಂದ ಇಳಿದು ಬರುತ್ತಿತ್ತು. ಹಾಗೆ ಬರುವಾಗ ಮರೆಯದೇ ಗಲ್ಲಾಪೆಟ್ಟಿಗೆ ಎಂಬ ನಾಜೂಕಾದ ಹಳೆಯ ಕಾಲದ ರೋಸ್‌ವುಡ್ ಮೇಜಿನ ಡ್ರಾವರ್‌ಗೆ ಕೀಹಾಕಿ, ಐದಾರು ಕೀಲಿ ಕೈಗಳು ಜೋತಾಡುತ್ತಿದ್ದ ಕೀ ರಿಂಗನ್ನು ಶರ್ಟಿನ ಜೇಬಿಗಿಳಿಸಿಕೊಂಡು ದೇಹ ರಸ್ತೆಗೆ ಬರುತ್ತಿತ್ತು. ಅದೂ ನಿಷ್ಕಲ್ಮಷ ನಗೆಯೊಂದಿಗೆ ಟಾಕ್ಳೆ ವಾಮನನ ಬಳಿ ಬರುತ್ತಿದ್ದ. ಟಾಕ್ಳೆಯ ಹತ್ತಿರದ ಸಂಬಂಧಿ ಹುಡುಗ ಟಾಕ್ಳೆಯ ಸಹಾಯಕನಾಗಿ ಟಾಕ್ಳೆಯ ಅಂಗಡಿಯಲ್ಲೇ ಇರುತ್ತಿದ್ದ. ಅನಂತರ ಅವನ ಸುಪರ್ದಿಗೆ ಅಂಗಡಿ ಬಿಟ್ಟು ಟಾಕ್ಳೆ ಒತ್ತಡ ಹೇರಿ ವಾಮನನ್ನ ಷಣ್ಮುಖ ಕೃಪಾ ಚಾ ಅಂಗಡಿಗೆ ಕರೆದುಕೊಂಡು ಬರುತ್ತಿದ್ದ. ವಾಮನನದು ಒಂದು ವರ್ಷದ ಅವಧಿಯಲ್ಲಿ ಕಡಿಮೆ ಎಂದರೂ ಮೂರು ನಾಲ್ಕು ಬಾರಿ ಸ್ವಂತ ಊರಾದ ಗಿಣಿಪುರಕ್ಕೆ ಹೋಗಿ ಬರುವುದು ಇದ್ದೇ ಇರುತ್ತಿತ್ತು. ಹೋದಾಗ ಟಾಕ್ಳೆಯನ್ನು ಕಾಣದೇ ಇರಲಾಗದು. ಸ್ವಚ್ಛ ನಗೆ, ಬಿಳುಪು ಹಲ್ಲುಗಳು, ತುಸು ಉದ್ದದ ಹಲ್ಲುಗಳು ಎಂದು ಗುರುತಿಸಬಹುದಾದರೂ ವಕ್ರ ಹಲ್ಲುಗಳಲ್ಲ. ಅನಾವಶ್ಯಕವಾಗಿ ತುಟಿ ಮೀರಿ ಹೊರಗೆ ಬಾರವು. ನಕ್ಕಾಗ ಅಲ್ಲಿ ಪ್ರೀತಿಯ ವಿನಾ ಇನ್ನೇನೂ ಕಾಣದು. ತುಸು ದೊಡ್ಡ ದೊಳ್ಳು. ಹೊಟ್ಟೆ ಉರುಟೇ ಇತ್ತು. ನಿರೀಕ್ಷೆ ಮೀರಿ ತಲೆ ಬೋಳೇ ಆಗಿತ್ತು. ಸದಾ ಲುಂಗಿ, ತುಸು ಉದ್ದನೆಯ ಬುಶ್‌ಶರಟು. ಹೆಗಲಿಗೊಂದು ಟವೆಲ್ ಕೂಡಾ ವೈಫಲ್ಯಗೊಳ್ಳದೆ ಟಾಕ್ಳೆಯ ಟ್ರೇಡ್ ಮಾರ್ಕ್ ಆಗಿದ್ದವು. ಅಂತೂ ಏನೋ ಖುಷಿ ವಾಮನನಿಗೆ ಟಾಕ್ಳೆಯ ಬಳಿ ಸಿಕ್ಕಿ ಮಾತನಾಡಿ